ಕಥೆ

# ಕೊನೆಯ ಕಂತು



**ರೇಣುಕಾ ರಮಾನಂದ**

ಕಲೆ: ಮುರಳೀಧರ್ ರಾಥೋಡ್

"ಅರೇ ಅಕ್ಕಾ...! ಮನೇಲೆ ಇದ್ದೀರಲ್ಲ... ಸ್ಕೂಲಿಗೆ ಹೋಗಿಲ್ಲೇನು ಇವತ್ತ?" ಎನ್ನುತ್ತ ಅಂಗಳದ ದಣಪೆ ದಾಟಿ ಒಳಬಂದಳು ಬಸವಣ್ಣಿ. ಬರುವಾಗ ದಣಪೆಗೆ ಲಗತ್ತಾಗಿಯೇ ಇರುವ ದೊಡ್ಡ ನಂದಿಬಟ್ಟಲು ಗಿಡದ ಜೋಡಿ ಹೂ ಕೊಯ್ದು ತನ್ನ ಮೋಟು ಜಡೆಯ ಕೂದಲಿನ ಎಳೆ ತೆಗೆದು ಸಿಕ್ಕಿಸಿಕೊಂಡೇ ಒಳಬರೋದು ಅವಳು.

ಮುಂಬಾಗಿಲ ಮೆಟ್ಟಿಲಂಚಿನ ತೆಣೆಯ ಮೇಲೆ ಕುಳಿತು ಸೂಜಿ ಹಿಡಿದು ಏನನ್ನೋ ಹೊಲಿಯುತ್ತಿದ್ದ ಅನಘಾ, "ನಿನ್ನೆ ರಿಕ್ಷಾಕ್ಕೆ ದನ ಅಡ್ಡ ಬಂತು ಬಸವಣ್ಣೀ... ಸಡನ್ ಬ್ರೇಕ್ ಹಾಕಿದ ನೋಡು ರಿಕ್ಷಾ ಡ್ರೈವರ್... ರಿಕ್ಷಾ ತುಂಬ ಜನ. ಹಾಗಾಗಿ ತುಸು ಮುಂದೆ ಜರುಗಿ ಕೂತವಳು ಮುಗ್ಗರಿಸಿ ಬಿದ್ದೆ. ಕೈ ಚೂರು ತರಚಿದೆ. ಟ್ವಿಸ್ಟ್ ಆದ ಹಾಗೆ ಆಗಿತ್ತು. ನೋವು ಸ್ವಲ್ಪ ಜಾಸ್ತಿಯೇ ಇದೆ ಅನ್ನು... ಅದಕ್ಕೆ ಇವತ್ತು ಸ್ಕೂಲಿಗೆ ರಜೆ ಹಾಕಿರುವೆ..'' ಅನ್ನುತ್ತ ಸೂಜಿ ನೂಲು ಡಬ್ಬಿಯೊಳಗಿಟ್ಟು ಸಾವಕಾಶ ಎದ್ದಳು.

"ಅರೆ ಕೈ ನೋವು ಅನ್ನಾಕತ್ತೀರಿ, ಮತ್ತೆ ಸೂಜಿ ಹಿಡಿದು ಹೊಲಿಯಾಕ ಹತ್ತೀರಲ್ಲ. ಇದ್ಯಾಕೋ ಬೇಸಿಲ್ಲ. ನೀವು ಎದ್ದ್ ಒಳಕ್ಕ ನಡೀರಿ... ನಾನು ಡಬ್ಬಾ ಗಿಬ್ಬಾ ಎಲ್ಲ ತಂದಿಡ್ತೀನಿ ಒಳಕ್ಕ..." ಎನ್ನುತ್ತ ಬಸವಣ್ಣಿ, "ಯಾವಾಗ ನೋಡಿದ್ರೂ ತಲೆಬಿಸಿಯಾಗೇ ಇರ್ತೀರಿ. ಹೆಚ್ಚು ವಿಚಾರ ಮಾಡ್ತಾನೇ ಇರಬಾರ್ದು ನೋಡಿ... ಮನೆಮಂದಿ ಎದ್ರೆ ಬಿದ್ರೆ ನಾವು ಜ್ವಾಪಾನ ಮಾಡಾಕ ಇದ್ದೀವಿ. ಆದ್ರ ನಾವ ಬಿದ್ರೆ ಯಾರ ಮಾಡ್ತಾರ... ಹೆಣಮಕ್ಳು ಆದಷ್ಟು ನಮ್ ನಮ್ ಜೀವಕ್ಕ ನಾವ ಜ್ವಾಕಿ ಮಾಡ್ಕಂತಾನೇ ಇರ್ಬೇಕು" ಎನ್ನುತ್ತ ಅನಘಾಳ ಜೊತೆಗೇ ಒಳಬಂದಳು. ಗಾಯ ಪರಿಶೀಲಿಸುತ್ತ, "ಇಷ್ಟಾದಕ್ಕ ಬೇಸಾಯ್ತು, ಆ ರಸ್ತೆಮ್ಯಾಗ ಕಲ್ಲುಗಣಿ ಲಾರಿಗಾಡಿ ಎಲ್ಲ ತಿರಗಾಡತ್ತಾವ, ಅವೇನಾದ್ರೂ ಅಷ್ಟೇ ಹೊತ್ತಿಗ ಬಂದ್ ಹೊಕ್ಕಬಿಟ್ಟಿದ್ರ ಕತಿ ಏನಾಗ್ತಿತ್ತ" ಎನ್ನುತ್ತ ಅಡುಗೆ ಮನೆಗೆ ಹೋಗಿ ತೊಳೆಯಲಿಟ್ಟ ಪಾತ್ರೆಗಳ ಬುಟ್ಟಿ ಎತ್ತಿಕೊಂಡು ಬಂದು ಬಾಳೆ ಬುಡದ ನಲ್ಲಿಯ ಹತ್ತಿರ ಕುಳಿತುಕೊಂಡಳು.

ಪಾತ್ರೆ ತೊಳೆದು, ಅಂಗಳ ಗುಡಿಸಿ, ನೆಲ ಒರೆಸಿ ಅವಳು ಒಳಬರೋ ಹೊತ್ತಿಗೆ ಅನಘಾ ಚಹಾಕ್ಕಿಟ್ಟಿದ್ದಳು. "ಅಕ್ಕಾ ನೂರು ರೂಪೈ ಇದ್ರೆ ಕೊಟ್ಟಿರಿ... ನನ್ನ ಪಗಾರದಾಗ ಮುರ್ಕೋರಂತೆ.., ಇವತ್ತು ಪಕ್ಕದ ಊರಲ್ಲಿ ಮಹಾಲಿಂಗನ ತೇರಂತ... ಸಂಜೆ ಹೋಗುವ ಅಂತ ಬಾಜುಮನಿ ಹೆಂಗಸ್ರು ನಾವು ಕೂಡೇ ಮಾತಾಡ್ಕಂದೀವಿ... ಮಕ್ಳೂ ಕುಣಿಯಾಕತ್ತಾವ ಹೋಗುವ ಅಂತ... ನಾಳೆ ನಿಮ್ಮ ಕೆಲಸಕ್ಕ ತಪ್ಸಂಗಿಲ್ಲ" ಅಂದಳು.

"ನೂರು ರೂಪಾಯಿಯಲ್ಲಿ ಎಂತಾ ಜಾತ್ರಿ, ತೇರು ಮಾಡ್ತೀಯೇ..." ಎನ್ನುತ್ತಲೇ ಮತ್ತೊಂದು